UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Sunday
15-11-2026

UNIVERSITY OF AGRICULTURAL SCIENCES, BANGALORE
NAAC A Accredited
Estate Office, Naik Bhavan, GKVK, Bengaluru-560 065
Ph : 2330153-250 / Direct : 23332765
Website : www.uasbangalore.edu.in E-mail : eo@uasbangalore.edu.in

NO. EO/SPO/e-Proc/12/2026-27 Date: 13-11-2026

TENDER NOTIFICATION

(Through e-procurement portal only)

The University of Agricultural Sciences, Bengaluru has invited Tender in the prescribed form as per Standard Tender Document KG-1 & KG-2, from the reputed firms for the procurement of Equipment's. Blank Tender Documents can be down loaded from **kppp.karnataka.gov.in. Last date and time for uploading the tender on 25-11-2026 up to 4.00 P.M. The Technical Bid will be opened on 28.11.2026 at 10.30 a.m. The Financial Bid will be opened on 30.11.2026 at 10.30 a.m.** Help Desk – **09240214000 / 09240214001 support@eprochelpdesk.com.** The University reserves the right to accept or reject any or all the tenders without assigning any reasons.

Sd/-
Estate Officer

DIPR/CP/3703/AKAR/2026-27

Hindu pg 07

ನಾಳೆಯಿಂದ ಕೃಷಿ ಮೇಳ | ರೈತರಿಗೆ ಮಾಹಿತಿ ನೀಡಲು ಸಜ್ಜು

10 ಎಕರೆಯಲ್ಲಿ 75 ಬೆಳೆ ಪ್ರದರ್ಶನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

■ **ಬರ ಹಿನ್ನೆಲೆ ತಂತ್ರಜ್ಞಾನ ಆಧಾರಿತ ಬೇಸಾಯ ಪದ್ಧತಿ ಪರಿಚಯ**

ರಾಜ್ಯದಲ್ಲಿ ಈ ಬಾರಿ ಬರ ಆವರಿಸಿರುವ ಹಿನ್ನೆಲೆಯಲ್ಲಿ ಖುಷ್ಕಿ ಸೇರಿದ ವಿವಿಧ ಬೆಳೆ ಪದ್ಧತಿಗಳನ್ನು ಕಡಿಮೆ ನೀರಿನಲ್ಲಿ ಬೇಸಾಯ ಮಾಡುವ ವಿದಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ವಿವರಣೆ ನೀಡಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಸಜ್ಜಾಗಿದ್ದಾರೆ.

ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ಸೋಮವಾರ (ನ.16) ಆರಂಭ ಆಗಲಿರುವ ಮೂರು ದಿನಗಳ ಕೃಷಿ ಮೇಳದಲ್ಲಿ ತಂತ್ರಜ್ಞಾನ ಆಧಾರಿತ ವ್ಯವಸಾಯ ವಿಧಾನಗಳನ್ನು ಪರಿಚಯಿಸಲು ಒತ್ತು ನೀಡಲಾಗಿದೆ. ವಿಶೇಷವಾಗಿ ವಿವಿ ವತಿಯಿಂದ ಹತ್ತು ಎಕರೆ ಪ್ರದೇಶದಲ್ಲಿ 75 ವೈವಿಧ್ಯಮಯ ಬೆಳೆ ಹಾಗೂ ತಳಿಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ರಾಗಿ, ಜೋಳ ಸೇರಿ ಸಿರಿಧಾನ್ಯಗಳ ವಿವಿಧ ತಳಿಗಳನ್ನು ಕಡಿಮೆ ನೀರಿನಲ್ಲಿ ಬೆಳೆಸುವ ವಿಧಾನದ ಮಾಹಿತಿ ನೀಡಲಾಗುತ್ತದೆ. ಸೊಪ್ಪು, ತರಕಾರಿ, ಪುಷ್ಪ ಬೆಳೆಗಳಿಗೆ ಸಂಬಂಧಿಸಿದಂತೆ ವಿವಿ ಅಭಿವೃದ್ಧಿಪಡಿಸಿರುವ ಹೊಸ ತಳಿಗಳ ಪ್ರತ್ಯಕ್ಷಿಕೆಗೆ ವ್ಯವಸ್ಥೆ ಮಾಡಲಾಗಿದೆ.

ಪ್ರಧಾನ ವೇದಿಕೆ ಸಮೀಪವಿರುವ ತಾಕುಗಳಲ್ಲಿ ವಿವಿ ಸಂಶೋಧನಾ ವಿದ್ಯಾರ್ಥಿಗಳು ಅಭಿವೃದ್ಧಿ ಪಡಿಸಿರುವ ವೈವಿಧ್ಯಮಯ ಬೆಳೆಗಳ ತಳಿಗಳನ್ನು ಆಯಾ ವಿಷಯ ತಜ್ಞರು, ಪರಿಣಿತರು ರೈತರಿಗೆ ವಿವರಿಸಲಿದ್ದಾರೆ. ರಾಗಿ, ಜೋಳ, ಹರಳು, ಕಡಲೆಕಾಯಿ ಬೆಳೆಗಳ ಹೊಸ ತಳಿ ಬೆಳೆ ಪದ್ಧತಿ ಬಗ್ಗೆ ಪ್ರಧಾನವಾಗಿ ರೈತರೊಂದಿಗೆ ಚರ್ಚೆ, ಸಂವಾದ, ಮಾಹಿತಿ ವಿನಿಮಯಕ್ಕೆ ವೇದಿಕೆ ಕಲ್ಪಿಸಲಾಗಿದೆ.

ಜಾನುವಾರುಗಳ ಪ್ರದರ್ಶನ: ಜಾನುವಾರು ಪ್ರದರ್ಶನದಲ್ಲಿ ವಿವಿಧ ತಳಿಗಳ ಹಸು, ಎಮ್ಮೆ, ಎತ್ತು, ಆಡು, ಕುರಿ, ಕೋಳಿಗಳು ವಿಶೇಷ ಆಕರ್ಷಣೆ ಆಗಿರಲಿದೆ. ಜತೆಗೆ ಮನೆಗಳಲ್ಲಿ ಪ್ರದರ್ಶನಕ್ಕೆ ಬಳಸುವ ಅಲಂಕಾರಿಕ ಮೀನುಗಳು ಹಾಗೂ ಕೃಷಿ ಹೊಂಡ, ಕೊಳಗಳಲ್ಲಿ ಸಾಕಣೆ ಮಾಡುವ ತಳಿಗಳ ಬಗ್ಗೆ ಪರಿಚಯ ಮಾಡಿಕೊಡಲಾಗುತ್ತದೆ. ಕೃಷಿಯ ಉಪ ಕಸುಬುಗಳನ್ನು ಹೊಸ ವಿಧಾನದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಪ್ರತ್ಯೇಕ ಪ್ರದರ್ಶನ ಏರ್ಪಡಿಸಲಾಗಿದೆ. ಈ ಬಾರಿ ವಾಣಿಜ್ಯ ಮಳಿಗೆಗಳು ಇಲ್ಲದ ಕಾರಣ ಕೃಷಿ/ತೋಟಗಾರಿಕೆ ವಿವಿಗಳು, ಐಸಿಎಆರ್ ಸಂಸ್ಥೆಗಳು ಹಾಗೂ ಸರ್ಕಾರದ ವಿವಿಧ ಇಲಾಖೆಗಳ 100ಕ್ಕೂ ಅಧಿಕ ಮಳಿಗೆಗಳಲ್ಲಿ ಮಾಹಿತಿ ಒದಗಿಸಲಾಗುತ್ತದೆ.


ಜಿಕೆವಿಕೆಯಲ್ಲಿ ಬೆಳೆಸಲಾಗಿರುವ ಅಲಂಕಾರಿಕ ಸೂರ್ಯಕಾಂತಿ ತಳಿಯನ್ನು ವಿವಿ ಪ್ರಭಾರ ಕುಲಪತಿ ಹಾಗೂ ಅಧಿಕಾರಿಗಳು ವೀಕ್ಷಿಸಿದರು.

ಕೃಷಿ ಮೇಳದ ವಿಶೇಷತೆ ಏನು?

- ವಿವಿಧ ವಿವಿಗಳು ಸಂಶೋಧಿಸಿರುವ ಬೆಳೆ ವೈವಿಧ್ಯತೆ ಪ್ರದರ್ಶನ
- ಬರ ನಿರ್ವಹಣಾ ತಂತ್ರಜ್ಞಾನ, ಬರ ಪರಿಸ್ಥಿತಿಗೆ ಸೂಕ್ತವಾದ ಬೆಳೆ ಪ್ರಾತ್ಯಕ್ಷಿಕೆ
- ಯಂತ್ರೋಪಕರಣಗಳಿಂದ ಕೃಷಿ ಕಾರ್ಯ ಕೈಗೊಳ್ಳುವ ವಿಧಾನ
- ಕಡಿಮೆ ನೀರು ಬಳಸಿ ಕೈಗೊಳ್ಳಬಹುದಾದ ಬೆಳೆ ಪದ್ಧತಿಗಳು
- ಸಿರಿಧಾನ್ಯ ಹಾಗೂ ಸಾವಯವ ಕೃಷಿ ವಿಧಾನ, ಬೆಳೆಗಳ ಪರಿಚಯ
- ಕೃಷಿಯ ಉಪ ಕಸುಬುಗಳನ್ನು ಕೈಗೊಂಡು ಆದಾಯ ವೃದ್ಧಿಸುವ ಪ್ರತ್ಯಾಕ್ಷಿಕೆ

Vijayavani pg 03

V-karnataka pg 05

ಬರ ನಿರೋಧಕ ತಳಿಗಳ ಪ್ರಾತ್ಯಕ್ಷಿಕೆಗೆ ಆದ್ಯತೆ | ತಂತ್ರಜ್ಞಾನ ಆಧರಿತ 100 ಮಳಿಗೆಗಳ ಆಕರ್ಷಣೆ | ನಾಳೆ ಚಾಲನೆ

ಕೃಷಿ ಮೇಳಕ್ಕೆ ಜಿಕೆವಿಕೆ ಕ್ಯಾಂಪಸ್ ಸಜ್ಜು

■ **ವಿಕ ಸುದ್ದಿಲೋಕ** ಬೆಂಗಳೂರು

ಸೋಮವಾರದಿಂದ (ನ.16) ಮೂರು ದಿನಗಳ ಕಾಲ ನಡೆಯಲಿರುವ ಕೃಷಿ ಮೇಳಕ್ಕೆ ಜಿಕೆವಿಕೆ ಆವರಣ ಸಜ್ಜಾಗಿದೆ.

ಬರಗಾಲವನ್ನು ಸಮರ್ಥವಾಗಿ ಎದುರಿಸುವ ತಂತ್ರಜ್ಞಾನ ಹಾಗೂ ಆಧುನಿಕ ಕೃಷಿ ನಾವೀನ್ಯತೆಗಳನ್ನು ರೈತರಿಗೆ ಪರಿಚಯಿಸುವ ನಿಟ್ಟಿನಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ನ.16, 17 ಮತ್ತು 18ರಂದು ಮೂರು ದಿನಗಳ ಬೃಹತ್ 'ಕೃಷಿ ಮೇಳ' ಆಯೋಜಿಸಿದೆ. ಮೇಳಕ್ಕಾಗಿ ಬೆಳೆದಿರುವ ಅಲಂಕಾರಿಕ ಸೂರ್ಯಕಾಂತಿ, ಬರಸಹಿಷ್ಣುತೆ ಹೊಂದಿರುವ ಸಿರಿಧಾನ್ಯಗಳು, ಬಣ್ಣದ ಸೇವಂತಿಗೆ ಹೂವು ಇತ್ಯಾದಿ ಬೆಳೆಗಳನ್ನು ಶುಕ್ರವಾರ ವಿವಿ ಹಂಗಾಮಿ ಕುಲಪತಿ ಡಾ. ಪಿ. ವೆಂಕಟರವಣ ಸೇರಿದಂತೆ ವಿವಿ ಅಧಿಕಾರಿಗಳು ವೀಕ್ಷಿಸಿದರು.

ಈ ಬಾರಿಯ ಮೇಳವು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿದ್ದು, ಸುಮಾರು 100 ತಂತ್ರಜ್ಞಾನ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಹವಾಮಾನ ವೈಪರಿತ್ಯಕ್ಕೆ ಅನುಗುಣವಾಗಿ ಬರ ನಿರ್ವಹಣಾ ತಂತ್ರಗಳು, ಬರ ನಿರೋಧಕ ಬೆಳೆ ತಳಿಗಳ ಪ್ರಾತ್ಯಕ್ಷಿಕೆಗಳನ್ನು ರೈತರಿಗಾಗಿ ಸಿದ್ಧಪಡಿಸಲಾಗಿದೆ.

ವಿಚಾರ ಸಂಕಿರಣ, ತಜ್ಞರ ಸಲಹೆ: ರಾಜ್ಯದಲ್ಲಿ ಒದಗಿಸಲು 'ತಜ್ಞರ ಸಲಹಾ ಕೇಂದ್ರ'ವನ್ನೂ ಪ್ರಶ್ನೆ ಪ್ರದಾನ ಮಾಡಿ ಗೌರವಿಸಲಾಗುವುದು. ಕಂಡು ಬಂದಿರುವ ಎಲ್‌ನಿನೊ ಪರಿಣಾಮ, ಭವಿಷ್ಯದ ಸಿದ್ಧತೆಗಳು, ಹವಾಮಾನ ವೈಪರಿತ್ಯ ಚತುರ ಕೃಷಿ ಹಾಗೂ ಮಣ್ಣು-ನೀರು ಸಂರಕ್ಷಣೆ ಕುರಿತು ತಜ್ಞರು ವಿಚಾರ ಮಂಡಿಸಲಿದ್ದಾರೆ. ಅಲ್ಲದೆ, ರೈತರ ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ತರೆಯಲಾಗುತ್ತಿದೆ ಎಂದು ಕೃಷಿ ವಿವಿ ಹಂಗಾಮಿ ಕುಲಪತಿ ಡಾ. ಪಿ. ವೆಂಕಟರವಣ ತಿಳಿಸಿದರು.

ಸಾಧಕ ರೈತರಿಗೆ ಪ್ರಶಸ್ತಿ: ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು.


ಕೃಷಿ ಮೇಳದ ಹಿನ್ನೆಲೆಯಲ್ಲಿ ಸಜ್ಜುಗೊಳಿಸುವ ಪ್ರಾತ್ಯಕ್ಷಿಕೆಗಳನ್ನು ಕೃಷಿ ವಿವಿ ಹಂಗಾಮಿ ಕುಲಪತಿ ಡಾ.ಪಿ. ವೆಂಕಟರವಣ ಹಾಗೂ ಅಧಿಕಾರಿಗಳು ವೀಕ್ಷಿಸಿದರು.

10 ಎಕರೆಯಲ್ಲಿ 75 ಬೆಳೆಗಳ ವೈವಿಧ್ಯ

ಮೇಳದ ಪ್ರಮುಖ ಆಕರ್ಷಣೆಯಾಗಿ ಸುಮಾರು 10 ಎಕರೆ ಪ್ರದೇಶದಲ್ಲಿ 75 ವೈವಿಧ್ಯಮಯ ಬೆಳೆ ಹಾಗೂ ತಳಿಗಳನ್ನು ಒಂದೇ ಸೂರಿನಡಿ ವೈಜ್ಞಾನಿಕವಾಗಿ ಬೆಳೆದು ಪ್ರದರ್ಶಿಸಲಾಗುತ್ತಿದೆ. ಇದರೊಂದಿಗೆ 'ಕೀಟ ವಿಸ್ಮಯ', 'ಮಧುವನ', 'ಒಣಭೂಮಿ ಕೃಷಿ ಪ್ರಾತ್ಯಕ್ಷಿಕೆ' ಹಾಗೂ 'ಸಮಗ್ರ ಇಳುವರಿ ಪ್ರಾತ್ಯಕ್ಷಿಕೆ'ಗಳು ರೈತರ ಗಮನಸೆಳೆಯಲಿವೆ.

ಮೇಳದಲ್ಲಿ ವಿವಿ ಸಂಶೋಧನಾ ವಿಭಾಗಗಳು, ರಾಜ್ಯದ ವಿವಿಧ ಕೃಷಿ ವಿಶ್ವವಿದ್ಯಾಲಯಗಳು, ರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಹಾಗೂ ಅಭಿವೃದ್ಧಿ ಇಲಾಖೆಗಳು ಭಾಗವಹಿಸಿ ತಮ್ಮ ಯೋಜನೆಗಳನ್ನು ಪ್ರದರ್ಶಿಸಲಿವೆ.

ಪ್ರವೇಶ ದ್ವಾರದಿಂದ ಬಸ್ ವ್ಯವಸ್ಥೆ ರಿಯಾಯಿತಿ ಊಟದ ವ್ಯವಸ್ಥೆ: ಬರಗಾಲದ ಹಿನ್ನೆಲೆಯಲ್ಲಿ ಕೃಷಿ ಮೇಳವನ್ನು ಒಂದು ದಿನ ನಡೆಸಲು ಈ ಹಿಂದೆ ತೀರ್ಮಾನಿಸಲಾಗಿತ್ತು. ಕೃಷಿ ಸಚಿವರ ಸೂಚನೆ ಮೇರೆಗೆ ಕೊನೇ ಗಳಿಗೆಯಲ್ಲಿ ಕೃಷಿ ಮೇಳವನ್ನು ಮೂರು ದಿನಗಳಿಗೆ ವಿಸ್ತರಿಸಲಾಯಿತು. ಆದರೆ ಕಾಲಾವಕಾಶ ಕಡಿಮೆಯಿದ್ದುದರಿಂದ ದೊಡ್ಡ ಮಟ್ಟದಲ್ಲಿ ಮೇಳ ಮಾಡುವುದು ಕಷ್ಟವಾಗಿದೆ. 700-800 ಮಳಿಗೆಗಳನ್ನು ತೆರೆಯುವುದು, ದೊಡ್ಡ ದೊಡ್ಡ ಯಂತ್ರೋಪಕರಣಗಳ ಪ್ರದರ್ಶನ, ಆಕರ್ಷಕ ಜಾನುವಾರುಗಳನ್ನು ಕರೆಸುವುದು ಕಷ್ಟ ಆದರೆ, ಸಣ್ಣ ಮಟ್ಟದ ಯಂತ್ರಗಳು, ಕೆಲವು ಜಾನುವಾರುಗಳನ್ನು ಕೃಷಿ ಮೇಳಕ್ಕೆ ತರಿಸಲಾಗುತ್ತಿದೆ. 100 ಮಳಿಗೆಗಳನ್ನು ತೆರೆಯಲಾಗುವುದು ಎಂದು ಬೆಂಗಳೂರು ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಕೆ.ಪಿ. ರಘುಪ್ರಸಾದ್ ತಿಳಿಸಿದರು.

''ವಿವಿಯ ಪ್ರವೇಶ ದ್ವಾರದಿಂದ ರೈತರನ್ನು ಮೇಳದ ಸ್ಥಳಕ್ಕೆ ಕರೆದೊಯ್ಯಲು ಬಸ್ ಸೌಲಭ್ಯ ಕಲ್ಪಿಸಲಾಗುವುದು. ಜತೆಗೆ, ಬರುವ ರೈತರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆಯೂ ಇರಲಿದೆ. ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಕೋಲಾರ, ಬೆಂಗಳೂರು ಗ್ರಾಮಾಂತರ, ನಗರ ಜಿಲ್ಲೆಗಳಿಂದ ಕೃಷಿ ಇಲಾಖೆಯು ರೈತರನ್ನು ಕರೆತರುವ ವ್ಯವಸ್ಥೆ ಮಾಡುತ್ತಿದೆ,'' ಎಂದು ವಿವಿ ಸಂಶೋಧನಾ ನಿರ್ದೇಶಕ ಮೂಡಲಗಿರಿಯಪ್ಪ ತಿಳಿಸಿದರು.

Three-day Krishi Mela begins at GKVK tomorrow

Sessions on El Nino effect, climate-smart farming lined up

BENGALURU, DHNS



Focus will be on drought-resilient millets at Krishi Mela.

The University of Agricultural Sciences (UAS), Bengaluru, will organise its three-day Krishi Mela 2026 at the Gandhi Krishi Vignana Kendra (GKVK) campus from November 16 to 18, with a special focus on drought management technologies and climate-resilient agriculture practices.

The event aims to familiarise farmers with suitable crops and varieties for drought-prone regions, scientific farming methods and latest agriculture innovations to help them tackle challenges posed by changing climatic conditions.

Around 75 crops and varieties have been cultivated and displayed across nearly 10 acres as part of scientific demonstrations. Research departments of UAS Bengaluru, other state agriculture universities, national research institutes and government departments will participate in the mela, showcasing research findings, innovative technologies, development programmes and farmer-oriented initiatives.

Among major attractions will be Keeta Vismaya (insect wonder), Madhuvana (Honey Garden), dryland farming demonstrations and high-yielding crop varieties.

Expert-led seminars and interactive sessions will be held on the impact of El Nino on Karnataka and preparedness for its effects, climate-smart agriculture amid increasing climate variability, soil and water conservation.

A special farmers' advisory centre will be set up to provide on-the-spot solutions and expert guidance on agriculture issues. Progressive farmers and women farmers will be felicitated with awards at the state, district and taluk levels in recognition of their contributions to the sector.

Chief Minister D K Shivakumar will inaugurate the mela, while Minister Krishna Byre Gowda will preside over the function, according to the organisers. Agriculture Minister and Pro-Chancellor of UAS Bengaluru P M Narendra Swamy will release newly developed crop varieties and agricultural technologies. Union Minister Shobha Karandlaje will inaugurate the agricultural exhibition stalls.

Dec Hrd Pg 04

ಅವಕಾಶ | ನಾಳೆಯಿಂದ ಮತ್ತೆ ಆರಂಭ, ನ.20ಕ್ಕೆ ಅಂತಿಮ ರಿಸಲ್ಟ್

290 ಕೃಷಿ, ಪಶು, ಮೀನುಗಾರಿಕಾ ಸೀಟು ಭರ್ತಿಗೆ ಮತ್ತೆ ಕೌನ್ಸೆಲಿಂಗ್

• ಕನ್ನಡಪ್ರಭ ವಾರ್ತೆ ಬೆಂಗಳೂರು

ಬಿಎಸ್ಸಿಕೃಷಿ, ಪಶುವೈದ್ಯಕೀಯಮತ್ತುಮೀನುಗಾರಿಕೆ ಕೋರ್ಸ್‌ಗಳಲ್ಲಿ ಬಾಕಿ ಉಳಿದಿರುವ ಸುಮಾರು 290 ಸೀಟುಗಳನ್ನು ಭರ್ತಿ ಮಾಡಲು ನ.16ರಿಂದ ಮತ್ತೊಂದು ಸುತ್ತಿನ ಕೌನ್ಸೆಲಿಂಗ್ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತೀರ್ಮಾನಿಸಿದೆ.

ಉಳಿಕೆ ಸೀಟುಗಳನ್ನು ಭರ್ತಿ ಮಾಡಿಕೊಡುವಂತೆ ಕೃಷಿ ಮತ್ತು ಪಶು ವೈದ್ಯಕೀಯ ವಿಶ್ವವಿದ್ಯಾಲಯ ಕೋರಿಕೆ ಸಲ್ಲಿಸಿರುವ ಹಿನ್ನೆಲೆಯಲ್ಲಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಯಲಿದೆ. ನ.16ರಂದು ಉಳಿಕೆ ಸೀಟುಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ನ.19ರಂದು ಬೆಳಿಗ್ಗೆ 10 ಗಂಟೆಯೊಳಗೆ ಆಪ್ಷನ್ಸ್ ದಾಖಲಿಸಬೇಕು. ಅಂದೇ ಸಂಜೆ 5 ಗಂಟೆಗೆ ತಾತ್ಕಾಲಿಕ ಫಲಿತಾಂಶ ಹಾಗೂ ನ.20ರಂದು ಬೆಳಿಗ್ಗೆ 10ಗಂಟೆಗೆಅಂತಿಮಫಲಿತಾಂಶಪ್ರಕಟಿಸಲಾಗುತ್ತದೆ. ಸೀಟು ಹಂಚಿಕೆಯಾದವರು ನ.21ರೊಳಗೆ ಶುಲ್ಕ ಪಾವತಿಸಿ, ಅಂದೇ ಕಾಲೇಜುಗಳಲ್ಲಿ ಪ್ರವೇಶ ಪಡೆಯಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಹಣಾ ನಿದೇರ್ಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಈಗಾಗಲೇ ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆದಿರುವರು ಸಂಬಂಧಪಟ್ಟ ಕಾಲೇಜುಗಳಿಂದ ನಿರಾಕ್ಷೇಪಣಾ ಪತ್ರ ಪಡೆದು ಈ ಸುತ್ತಿನ ಆಪ್ಷನ್ಸ್ ದಾಖಲಿಸಬಹುದು. ಕೃಷಿ ವಿಜ್ಞಾನ ಹಾಗೂ ಪಶು ವೈದ್ಯಕೀಯ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮಾಡಿಕೊಂಡು, ನಂತರ ರದ್ದುಪಡಿಸಿಕೊಂಡಿರುವವರಿಗೆ ಅವಕಾಶ ಇರುವುದಿಲ್ಲ. ಹಾಗೆಯೇ ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳಿಗೆ ಸೇರಿರುವ ಹಾಗೂ 4ನೇ ಸುತ್ತು ಮತ್ತು ನಂತರದ ಸುತ್ತುಗಳಲ್ಲಿ ಸೀಟು ಹಂಚಿಕೆಯಾದವರು ಕೂಡ ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ. ಕೋರ್ಸು ಸೇರಲು ಇಚ್ಛಿಸುವವರು ಕಡ್ಡಾಯವಾಗಿ 35 ಸಾವಿರ ರು. ಮುಂಗಡ ಪಾವತಿಸಬೇಕು. ಇತರೆ ಕೋರ್ಸುಗಳಿಗೆ ಪಾವತಿಸಿದ ಶುಲ್ಕವನ್ನು ಈ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟಿಗೆ ಹೊಂದಾಣಿಕೆ ಮಾಡುವುದಿಲ್ಲ. ಹೊಸದಾಗಿ ಶುಲ್ಕ ಪಾವತಿಸಬೇಕು ಎಂದು ಅವರು ತಿಳಿಸಿದ್ದಾರೆ.

Kannadaprabha Pg 02

Hindu Pg 07

There is more to vanilla than its taste and aroma



SPEAKING OF SCIENCE

D. Balasubramanian

Vanilla is a common additive to make cakes, ice creams, and fragrant body lotions. Children enjoy a good vanilla ice cream. People often use vanilla as the primary flavour in baked goods and in chocolates. It is not just the flavour: vanilla also has health-promoting properties that have been known for centuries.

Vanilla comes from the fruits of the orchid herb that botanists call *Vanilla planifolia*, found mostly in tropical countries. Its medicinal properties have been known since ancient times. Traditional physicians of the 15th century in the Aztec region of Mexico had used the orchid pods as a remedy for stress and mental strain.

In India, the vanilla plant was brought by the Colonial British and the plant is now grown in Keralam, Karnataka, and Tamil Nadu.

In 2013, a group of scientists from Mysuru described the cultivation, chemistry, and nutraceutical properties of vanilla (DOI: 10.1080/10408398.2011.563879).

In 2024, a group of researchers in Uttar Pradesh also summarised the use of vanilla by Ayurvedic physicians for its therapeutic properties (*Int. J. Environ. Clim. Change*, vol.14, no. 2, pp. 809-817, 2024).

The vanilla flowers are greenish in colour with a soothing fragrance. Newborns breathe calmer and better when they smell vanilla, and adults sleep better. It is also known to reduce inflammation.

Vanilla's active component is an aromatic benzaldehyde called vanillin, which offers a sweet smell, taste, and flavour, while its sugar content is negligible. Vanillin is approved by the World Health Organization, the U.S. Food and Drug Administration, and the Food Safety and Standards Authority of India as a food additive. The Barnes Jewish Hospital in Washington University in the U.S. has listed that a tablespoon of vanilla extract has several minerals and vitamins but no fatty acids or cholesterol.



The vanilla flower belongs to the orchid family. FILE PHOTO

Vanilla's medicinal properties are largely due to vanillin. It soothes coughing, reduces blood pressure, and acts as an antidepressant. It also has reliable healing properties against certain wounds and is efficient as an antibacterial and anti-fungal agent. A review by a group of scientists from Nigeria (DOI: 10.1016/j.ejmcr.2022.100055) has shown that vanillin helps with regulating blood pressure, digestion, and has antimicrobial, antioxidant, and neuroprotective properties.

Likewise, a group of pharmacologists from Adelaide in Australia has also shown the biomedical advantages of vanillin in chronic wound healing and tissue regeneration (DOI: 10.1016/j.ijpharm.2026.127263). Given the vanilla plant is not available in several countries, and the medical and cosmetic advantages of vanillin, a short review of its chemical synthesis and biotransformation was recently published by a group from Jiangsu University, China in (DOI: 10.1016/j.rser.2023.113905).

The group also chemically modified lignin, which is present in plant cell walls, to produce vanillin. Scientists have also made vanillin by genetically modifying microbes (DOI: 1016/j.ces.2022/8049).

A 2019 review by Banerjee and Chattopadhyay from the University of Gauhati summarised the biotechnological aspects of vanillin (*J. Sci. Food Agric.* 99, 4999-506, 2019), including a description of how the molecule, besides its medicinal value, can also be used for metal plating, as a herbicide, a deodorant, and of course as a flavouring agent.

In addition to domestic consumption, India exports its vanilla to various countries, notably Bangladesh, Germany, and several in Africa, for several million dollars in revenue every year.

So the next time you have vanilla ice cream, you can enjoy its taste as well as its versatility.

dbala@lvpei.org

ಅಡಕೆ ಬೆಳೆಯಲ್ಲಿ ವೈಜ್ಞಾನಿಕ ಕೃಷಿ ಪದ್ಧತಿಗೆ ಹೆಚ್ಚು ಆದ್ಯತೆ

ರಾಷ್ಟ್ರೀಯ ತಾಂತ್ರಿಕ ಸಮಾವೇಶದಲ್ಲಿ ಹೆಬ್ಬಾರ ಮಾತು

ಸಂ.ಕ. ಸಮಾಚಾರ, ಬೆಂಗಳೂರು

ಅಡಕೆ ಬೆಳೆಯ ವಿಸ್ತೀರ್ಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಉತ್ಪಾದಕತೆ ಮತ್ತು ಲಾಭದಾಯಕತೆ ಹೆಚ್ಚಿಸಲು ರೈತರು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಿಪಿಸಿಆರ್‌ಐ ನಿವೃತ್ತ ನಿರ್ದೇಶಕ ಹೆಬ್ಬಾರ್ ಹೇಳಿದರು.

ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ನಡೆದ ರಾಷ್ಟ್ರೀಯ ಅಡಿಕೆ ತಾಂತ್ರಿಕ ಸಮಾವೇಶದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಅಡಕೆ ಬೆಳೆಯ ವಿಸ್ತೀರ್ಣ ಗಣನೀಯವಾಗಿ ಹೆಚ್ಚುತ್ತಿದೆ. 2016ರಲ್ಲಿ ಸುಮಾರು 4ರಿಂದ 5 ಲಕ್ಷ ಹೆಕ್ಟೇರ್‌ನಷ್ಟಿದ್ದ ಅಡಿಕೆ ಬೆಳೆಯ ಪ್ರದೇಶ ಪ್ರಸ್ತುತ 11 ಲಕ್ಷ ಹೆಕ್ಟೇರ್‌ಗೆ ತಲುಪಿದೆ. ಹೆಚ್ಚಿನ ಆದಾಯದ ನಿರೀಕ್ಷೆಯಿಂದ ಸಾಂಪ್ರದಾಯಿಕ ಪ್ರದೇಶಗಳಷ್ಟೇ ಅಲ್ಲದೆ ಈಶಾನ್ಯ ರಾಜ್ಯಗಳಲ್ಲಿಯೂ ಅಡಕೆ ಕೃಷಿ ವಿಸ್ತರಿಸುತ್ತಿದೆ. ಆದರೆ, ಗುಣಮಟ್ಟದ ಸಸಿಗಳ ಲಭ್ಯತೆ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ ಎಂದರು.



ಹವಾಮಾನ ಬದಲಾವಣೆಯಿಂದ ಅಡಕೆ ಇಳುವರಿ, ಕಾಯಿ ಗುಣಮಟ್ಟ ಹಾಗೂ ರೋಗಗಳ ಪ್ರಮಾಣದ ಮೇಲೆ ಪರಿಣಾಮ ಉಂಟಾಗುತ್ತಿದೆ. 2021ರಲ್ಲಿ ಕಾಣಿಸಿಕೊಂಡ ಎಲೆ ಚುಕ್ಕೆ ರೋಗ ರೈತರಿಗೆ ತೊಂದರೆ ಉಂಟುಮಾಡಿತ್ತು. ಇಂತಹ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ ನಿಯಂತ್ರಿಸುವುದು ಅಗತ್ಯ. ಈ ನಿಟ್ಟಿನಲ್ಲಿ ವಿಟ್ಲದ ಕೇಂದ್ರ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ರೋಗ ಪತ್ತೆ ಕೇಂದ್ರ ಆರಂಭಿಸಲಾಗಿದೆ ಎಂದು ತಿಳಿಸಿದರು.

ಅಡಕೆ ಬೆಳೆಯಲ್ಲಿ ನುರಿತ ಕಾರ್ಮಿಕರ ಕೊರತೆಯೂ ಪ್ರಮುಖ ಸವಾಲಾಗಿದೆ. ವೈಜ್ಞಾನಿಕ ನಿರ್ವಹಣೆ ಇಲ್ಲದೆ ನಿರೀಕ್ಷಿತ ಇಳುವರಿ ಪಡೆಯಲು ಸಾಧ್ಯವಿಲ್ಲ. ಅಂಗಾಂಶ ಕೃಷಿ ಮತ್ತು ರೊಬೊಟಿಕ್ಸ್ ತಂತ್ರಜ್ಞಾನದ ಮೂಲಕ ಗುಣಮಟ್ಟದ, ಏಕರೂಪದ ಸಸಿಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನ ನಡೆದಿದೆ. ರೋಗ ನಿರೋಧಕ ಸಸಿಗಳ ಅಭಿವೃದ್ಧಿಗೂ ಸಂಶೋಧನೆ ನಡೆಯುತ್ತಿದೆ ಎಂದರು.

ಅಡಕೆಯಿಂದ ಕ್ಯಾನ್ಸರ್ ಬಗ್ಗೆ ಅಧ್ಯಯನ: ಅಡಕೆ ಸೇವನೆಯಿಂದ ಕ್ಯಾನ್ಸರ್ ಉಂಟಾಗುವ ಕುರಿತು ವೈಜ್ಞಾನಿಕ ಅಧ್ಯಯನಗಳು ನಡೆಯುತ್ತಿದ್ದು, 11 ವೈದ್ಯಕೀಯ ಸಂಶೋಧನಾ ಸಂಸ್ಥೆಗಳು ಈ ಯೋಜನೆಯಲ್ಲಿ ಭಾಗಿಯಾಗಿವೆ. ಮುಂದಿನ ಒಂದೂವರೆ ವರ್ಷದಲ್ಲಿ ಸ್ಪಷ್ಟ ಫಲಿತಾಂಶ ದೊರೆಯುವ ನಿರೀಕ್ಷೆಯಿದೆ. ಅಡಕೆಯಿಂದ ಪರ್ಯಾಯ ಉತ್ಪನ್ನಗಳ ತಯಾರಿಕೆ, ಟ್ಯಾನಿನ್ ಬಳಕೆ ಹಾಗೂ ಇತರ ಕೈಗಾರಿಕಾ ಉಪಯೋಗಗಳ ಬಗ್ಗೆಯೂ ಸಂಶೋಧನೆಗೆ ಅವಕಾಶವಿದೆ ಎಂದು ಹೇಳಿದರು.

ಅಡಕೆ ತೋಟಗಳು ದೀರ್ಘಕಾಲ ಕಾರ್ಬನ್ ಸಂಗ್ರಹಿಸುವ ಸಾಮರ್ಥ್ಯ ಹೊಂದಿರುವುದರಿಂದ ಕಾರ್ಬನ್ ಕ್ರೆಡಿಟ್ ಮೂಲಕ ರೈತರಿಗೆ ಆರ್ಥಿಕ ಲಾಭ ಕಲ್ಪಿಸುವ ಸಾಧ್ಯತೆಗಳ ಬಗ್ಗೆಯೂ ಅಧ್ಯಯನ ನಡೆಯುತ್ತಿದೆ. ಉತ್ಪಾದನೆ ಹೆಚ್ಚಿಸುವುದರ ಜತೆಗೆ ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.


ಅಧ್ಯಕ್ಷ ಸತೀಶ್‌ಚಂದ್ರ, ಉಪಾಧ್ಯಕ್ಷ ಹೆಚ್.ಎಸ್.ಮಹೇಶ್, ಕಾಸರಗೋಡು ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಸಾಧಕರಿಗೆ ಪ್ರಶಸ್ತಿ ವಿತರಣೆ

ತೋಟಗಾರಿಕೆಯಲ್ಲಿ ಬೆಳೆಗಳಲ್ಲಿ (ಪ್ಲಾಂಟೇಶನ್ ಬೆಳೆಗಳು) ಸಂಶೋಧನೆ ಹಾಗೂ ವಿಸ್ತರಣೆಯಲ್ಲಿ ಸಾಧನೆ ಮಾಡಿದ ಡಾ. ಎಂ.ಎನ್.ವೇಣು ಗೋಪಾಲ ರವರಿಗೆ ಜೀವಮಾನ ಸಾಧನಾ ಪ್ರಶಸ್ತಿ, ಎಸ್. ಆರ್.ಸತೀಶ್ಚಂದ್ರ, ಮಹೇಶ್ ಹುಲ್ಕಲಿ ಎಚ್.ಎಸ್, ಶಿವಕುಮಾರ್ ಎಚ್.ಎಸ್ ರವರಿಗೆ ಕರ್ನಾಟಕ ಅಡಿಕೆ ಸಹಕಾರ ರತ್ನ ಪ್ರಶಸ್ತಿ, ಡಾ. ಅಡಿವೆಪ್ಪ ನಾಗರಾಜ, ಡಾ. ಬಸವನಗೌಡ ಎಂ.ಜಿ., ಡಾ.ಹರೀಶ್ ಬಿ.ಎಸ್.ರವರಿಗೆ ರೈತ ಸ್ನೇಹಿ ಕೃಷಿ ವಿಜ್ಞಾನಿ ಪ್ರಶಸ್ತಿ, ಡಾ.ವೆಂಕಟರಮಣ ಹೆಗಡೆ, ಡಾ.ಸುನೀಲ ಡಿ. ತಮಗೊಳೆರವರಿಗೆ ತೋಟಗಾರಿಕೆ ಬೆಳೆಗಳ ವೈಜ್ಞಾನಿಕ ಸಲಹೆಗಾರರ ಪ್ರಶಸ್ತಿ, ಪ್ರಸಾದ್ ರಾಮ ಹೆಗಡೆಯವರಿಗೆ ಕರ್ನಾಟಕ ಕಾಳುಮೆಣಸು ರತ್ನ ಪ್ರಶಸ್ತಿ, ವಿಷ್ಣುಹೆಗಡೆ ಯವರಿಗೆ ಕರ್ನಾಟಕ ಅಡಿಕೆ ರತ್ನ ಪ್ರಸಶ್ತಿ, ಕೆ.ನಾಗರಾಜು ರವರಿಗೆ ಕರ್ನಾಟಕ ಸಾವಯುವ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

S-karnataka pg 05

Add versatility to your meals with avocados



Nutritious, healthy and versatile, avocados are a great addition to your daily diet. "With heart-healthy good fats, they help maintain healthy cholesterol levels. Packed with vitamins K, E, and C, along with dietary fibre, avocados support digestive health and add valuable nutrition to everyday meals. Half a Hass avocado (60g) provides 4.6g of fibre," says a spokesperson for World Avocado Organisation (WAO).

Scan to know more

From *parathas* and sandwiches to chutneys, *chaats* and salads, the creamy texture of avocados makes them easy to enjoy in familiar dishes. By incorporating avocados into your daily meals, you can add nutrition while keeping meals delicious and versatile.

Times of Ind Pg 04

ನೀಲಕಂಠ ಅಗ್ರಹಾರದ ರೈತನ ಸಾಧನೆಗೆ ಮೆಚ್ಚುಗೆ

20ಗುಂಟೆಯಲ್ಲಿ ಉತ್ತಮ ರಾಗಿ ಫಸಲು



ಮಾಲೂರು: ತಾಲೂಕಿನನೀಲಕಂಠಅಗ್ರಹಾರದ ಶಾಮಣ್ಣ ಅವರು ತಮ್ಮಲ್ಲಿರುವ ಕೇವಲ 20ಗುಂಟೆ ಜಮೀನಿನಲ್ಲಿ ಬಿಳ ರಾಗಿ ಬೆಳೆದು ಉತ್ತಮ ಫಸಲು ಪಡೆಯುವಮೂಲಕ ಇತರೆರೈತರಿಗೆಮಾದರಿಯಾಗಿದ್ದಾರೆ. ಕಡಿಮೆ ಜಮೀನಿನಲ್ಲಿಯೇ ಆಸಕ್ತಿ, ಪರಿಶ್ರಮ ಮತ್ತು ಕೃಷಿಯ ಮೇಲಿನ ಕಾಳಜಿಯಿಂದ ಉತ್ತಮ ಬೆಳೆ ಬೆಳೆಯಬಹುದು ಎಂಬುದನ್ನು ತಮ್ಮ ಕೃಷಿ ಸಾಧನೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಹೀಗಾಗಿ ಸುತ್ತಮುತ್ತಲಿನ ರೈತರು ಅವರನ್ನು ಪ್ರೀತಿಯಿಂದ 'ಬಿಳ ರಾಗಿ ಶಾಮಣ್ಣ' ಎಂದೇ ಗುರುತಿಸುತ್ತಿದ್ದಾರೆ.

ಬಿಳ ರಾಗಿ ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿದ್ದು, ಇದರಲ್ಲಿ ಕ್ಯಾಲ್ಸಿಯಂ, ನಾರಿನಾಂಶ, ಕಬ್ಬಣಾಂಶ ಸೇರಿದಂತೆ ಹಲವು ಖನಿಜಾಂಶಗಳಿವೆ. ಮೂಳೆಗಳ ಆರೋಗ್ಯ, ಜೀರ್ಣಕ್ರಿಯೆ ಹಾಗೂ ಸಮತೋಲಿತ ಆಹಾರಕ್ಕೆ ಇದು ಉತ್ತಮ ಆಯ್ಕೆಯಾಗಿದೆ. ರಾಗಿ ಮುದ್ದೆ, ರಾಗಿ ರೊಟ್ಟಿ, ಗಂಜಿ, ದೋಸೆ ಹಾಗೂ ಮಾಲ್ಟ್‌ಸೇರಿದಂತೆ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಬಹುದು.

ಇಂದಿನ ದಿನದಲ್ಲಿ ಸಿರಿಧಾನ್ಯಗಳಿಗೆ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಬಿಳ ರಾಗಿಯಂತಹ ಪೌಷ್ಟಿಕಬೆಳೆಗಳಿಗೆ ರೈತರು ಹೆಚ್ಚಿನ ಆದ್ಯತೆ ನೀಡಬೇಕಿದೆ. ಕೃಷಿ ಇಲಾಖೆಯ ಪ್ರೋತ್ಸಾಹ, ವೈಜ್ಞಾನಿಕ ಮಾರ್ಗ ದರ್ಶನ ಮತ್ತು ಸೂಕ್ತ ಮಾರುಕಟ್ಟೆ ವ್ಯವಸ್ಥೆ ದೊರೆತರೆ ಇಂತಹ ಬೆಳೆಗಳಿಂದ ರೈತರಿಗೆ ಉತ್ತಮ ಅವಕಾಶಗಳು ಸಿಗಲಿವೆ. ಕೇವಲ 20ಗುಂಟೆ ಜಮೀನಿನಲ್ಲಿ ಬಿಳ ರಾಗಿ ಬೆಳೆದು ಸಾಧನೆ ಮಾಡಿರುವ ಶಾಮಣ್ಣ ಅವರ ಪ್ರಯತ್ನವು ಕಡಿಮೆ ಜಮೀನು ಹೊಂದಿರುವ ರೈತರಿಗೂ ಹೊಸ ಭರವಸೆ ಮೂಡಿಸಿದ್ದು, ಕೃಷಿಯಲ್ಲಿ ಆಸಕ್ತಿ ಮತ್ತು ಪರಿಶ್ರಮವೇ ಯಶಸ್ಸಿನ ಮುಖ್ಯಮಂತ್ರ ಎಂಬುದನ್ನು ಸಾರಿದೆ.

Hosadiganta Pg 07

Hosadiganta Pg 06

'ಅಡಕೆ ಬೆಳೆ ವ್ಯಾಪ್ತಿ ಜಾಸ್ತಿ, ಉತ್ಪಾದನೆ ಕುಂಠಿತ'

ಬೆಂಗಳೂರು: ಜಗತ್ತಿನಲ್ಲೇ ಅತಿ ಹೆಚ್ಚು ಅಡಕೆ ಬೆಳೆಯುವ ದೇಶಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. 2025ರಲ್ಲಿ 11.06 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಕೆ ಬೆಳೆಯಲಾಗುತ್ತಿದೆ. ಕರ್ನಾಟಕದಲ್ಲಿ 7.98 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಅಡಕೆ ಬೆಳೆಯಲಾಗುತ್ತಿದೆ ಎಂದು ಕಾಸರಗೋಡಿನ ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಕೆ.ಬಿ.ಹೆಬ್ಬಾರ್ ತಿಳಿಸಿದರು.

ಕೃಷಿ ವಿವಿ ಹಳೆ ವಿದ್ಯಾರ್ಥಿಗಳ ಸಂಘ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ತೋಟಗಾರಿಕೆ ವಿವಿ, ಸಂಶೋಧನಾ ಸಂಸ್ಥೆಗಳು, ಸಹಕಾರ ಸಂಘಗಳ ಸಹಯೋಗದಲ್ಲಿ ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಅಡಕೆ ತಾಂತ್ರಿಕ ಸಮಾವೇಶ-2026'ರಲ್ಲಿ ಅವರು ಮಾತನಾಡಿದರು. ''ಇತ್ತೀಚೆಗೆ ಅಡಕೆ ಬೆಳೆ ಬೆಳೆಯುವ ಪ್ರದೇಶದ ವ್ಯಾಪ್ತಿ ಜಾಸ್ತಿಯಾಗಿದ್ದು ಉತ್ಪಾದನೆ ಕುಂಠಿತವಾಗಿದೆ. ಅಡಕೆ ಬೆಳೆಗಾರರಿಗೆ ಹಲವು ಸವಾಲುಗಳಿವೆ. ಅಡಕೆ ಬಳಕೆ ಕ್ಯಾನ್ಸರ್ ಕಾರಕವೆಂಬ ಕಾರಣವೊಡ್ಡಿ ನಿಷೇಧಿಸುವ ಪ್ರಹಸನಗಳೂ ನಡೆದಿವೆ. ಈ ದಿಸೆಯಲ್ಲಿ ಸರಕಾರ ವೈಜ್ಞಾನಿಕ ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕಿದೆ. ತೆಂಗಿನ ಬೆಳೆ ಮಾದರಿಯಲ್ಲೇ ಅಡಕೆ ಬೆಳೆಯಲ್ಲೂ ಉಪ ಉತ್ಪನ್ನಗಳ ತಯಾರಿಕೆಗೆ ಕ್ರಮ ವಹಿಸಬೇಕು,'' ಎಂದರು.

ಉಪ ಉತ್ಪನ್ನ ತಯಾರಿಗೆ ಸಲಹೆ

ಕ್ಯಾಂಪ್ಕೋ ಸಂಸ್ಥೆ ಅಧ್ಯಕ್ಷ ಸತೀಶ್‌ಚಂದ್ರ ಮಾತನಾಡಿ, ''ಅಡಕೆ ಬೆಲೆ ಕುಸಿದಾಗ ಎಲ್ಲರೂ ಒಗ್ಗಟ್ಟಾಗಿ ಎದುರಿಸಬೇಕಿದೆ.. ಅಧ್ಯಯನ ನಡೆಸಿ ಸಮಸ್ಯೆಗೆ ಪರಿಹಾರ ಹುಡುಕಬೇಕು,'' ಎಂದರು. ಕಾರ್ಯಕ್ರಮ ಸಂಘಟಕ ಐಎಟಿ ಅಧ್ಯಕ್ಷ ಎ.ಬಿ.ಪಾಟೀಲ, ಎಚ್.ಎಸ್.ಶಿವಕುಮಾರ, ಮಹೇಶ ನಾಗರಾಜ್, ಆರ್.ಜಿ.ಅಗರವಾಲ, ಹರೀಶ್ ಇದ್ದರು.